ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	212
ವಿಧಾನ ಪರಿಷತ್ತು ಸದಸ್ಯರ ಹೆಸರು	:	ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	13.09.2021
ಉತ್ತರಿಸುವ ಸಚಿವರು	:	ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಜನತೆಗೆ ನೀಡುವ ಆಹಾರ ಧಾನ್ಯಗಳ ಸಬ್ಸಿಡಿಗೆ ಪ್ರತಿ ವರ್ಷಕ್ಕೆ ಎಷ್ಟು ಖರ್ಚು ಮಾಡಲಾಗುವುದು; (ವಿವರ ನೀಡುವುದು)</td><td>
2020-21ನೇ ಸಾಲಿನಲ್ಲಿ ಅನ್ನಭಾಗ್ಯ ಯೋಜನೆಯಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಪಡಿತರ ಫಲಾನುಭವಿಗಳಿಗೆ ಆಹಾರ ಧಾನ್ಯಗಳನ್ನು ವಿತರಿಸಲು ಈ ಕೆಳಕಂಡಂತೆ ಅನುದಾನವನ್ನು ವೆಚ್ಚ ಮಾಡಲಾಗಿರುತ್ತದೆ.
(ರೂ. ಲಕ್ಷಗಳಲ್ಲಿ)
<table>
<tr><th>ಜಿಲ್ಲೆ</th><th>ಅಕ್ಕಿ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ</th><th>ಗೋಧಿ ಸಹಾಯಧನ ಮತ್ತು ಸಾಗಾಣಿಕೆ ವೆಚ್ಚ</th><th>ಒಟ್ಟು</th></tr>
<tr><td>ಕಲಬುರಗಿ</td><td>3779.86</td><td>670.24</td><td>4450.10</td></tr>
<tr><td>ಯಾದಗಿರಿ</td><td>2696.70</td><td>808.54</td><td>3505.24</td></tr>
<tr><td></td><td>6476.56</td><td>1478.78</td><td>7955.34</td></tr>
</table>
</td></tr>
<tr><td>ಆ</td><td>ಇದರಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ಪಾಲು ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>
ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಈ ಕೆಳಕಂಡಂತೆ ಪಡಿತರ ಚೀಟಿಗಳನ್ನು ಹೊಂದಿರುವ ಕುಟುಂಬಗಳಿರುತ್ತವೆ.
<table>
<tr><th>ಜಿಲ್ಲೆ</th><th>ಅಂತ್ಯೋದಯ</th><th>ಆದ್ಯತಾ</th><th>ಆದ್ಯತಾ ಫಲಾನುಭವಿಗಳ ಸಂಖ್ಯೆ</th></tr>
<tr><td>ಕಲಬುರಗಿ</td><td>63901</td><td>487715</td><td>1652674</td></tr>
<tr><td>ಯಾದಗಿರಿ</td><td>29527</td><td>233804</td><td>848467</td></tr>
<tr><td>ಒಟ್ಟು</td><td>93428</td><td>721519</td><td>2501141</td></tr>
</table>
ಎಲ್ಲಾ ಅಂತ್ಯೋದಯ ಪಡಿತರ ಚೀಟಿಗಳಿಗೆ ಮತ್ತು 673424 ಆದ್ಯತಾ ಪಡಿತರ ಚೀಟಿಗಳಿಗೆ ನೀಡುತ್ತಿರುವ ಅಕ್ಕಿ ಹಂಚಿಕೆಯನ್ನು ಕೇಂದ್ರ ಸರ್ಕಾರದಿಂದ ಪ್ರತಿ ಕೆ.ಜಿ.ಗೆ ರೂ.3 ದರದಲ್ಲಿ ಹಾಗೂ ಜೋಳವನ್ನು ರೂ.1.00 ದರದಲ್ಲಿ ಖರೀದಿಸಿ ಪಡಿತರ ಫಲಾನುಭವಿಗಳಿಗೆ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ಸದರಿ ವೆಚ್ಚವನ್ನು ರಾಜ್ಯ ಸರ್ಕಾರದಿಂದ ಭರಿಸಲಾಗುತ್ತದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ನಿಗಧಿಪಡಿಸಿರುವ ಸಂಖ್ಯೆಗಿಂತ ಹೆಚ್ಚುವರಿಯಾಗಿ ವಿತರಿಸಿರುವ 48095 ಆದ್ಯತಾ ಪಡಿತರ ಚೀಟಿಗಳಿಗೆ ನೀಡುತ್ತಿರುವ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ.25-00 ದರದಲ್ಲಿ ಭಾರತೀಯ ಆಹಾರ ನಿಗಮದ ಮುಕ್ತ ಮಾರುಕಟ್ಟೆ ಯೋಜನೆ (OMSS) ಯಡಿ ಖರೀದಿಸಿ, ಪಡಿತರ ಫಲಾನುಭವಿಗಳಿಗೆ ಉಚಿತವಾಗಿ ಹಂಚಿಕೆ ಮಾಡಲಾಗುತ್ತಿದೆ.
</td></tr>
</table>

ಇ	ಮೇಲ್ಕಂಡ ಜಿಲ್ಲೆಗಳ ಜನತೆಗೆ ನೀಡುವ ಆಹಾರ ಧಾನ್ಯವನ್ನು ಸರ್ಕಾರ ಎಲ್ಲಿಂದ ಖರೀದಿ ಮಾಡಲಾಗುತ್ತದೆ; ಯಾವ ದರದಲ್ಲಿ ಅಕ್ಕಿ ಹಾಗೂ ಇತರ ಆಹಾರ ಧಾನ್ಯಗಳನ್ನು ಖರೀದಿ ಮಾಡಲಾಗುತ್ತದೆ? (ವಿವರ ನೀಡುವುದು)	ಭಾರತೀಯ ಆಹಾರ ನಿಗಮದಿಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ.3ರ ದರದಲ್ಲಿ, ರಾಗಿ ಮತ್ತು ಜೋಳವನ್ನು ರೂ.1ರ ದರದಲ್ಲಿ ಖರೀದಿಸಲಾಗುತ್ತಿದೆ ಹಾಗೂ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಹೆಚ್ಚುವರಿ ಆದ್ಯತಾ (PHH) ಪಡಿತರ ಚೀಟಿಗಳಿಗೆ ಅಗತ್ಯವಿರುವ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 25/-ರಂತೆ ಹಾಗೂ ಎಲ್ಲಾ ಆದ್ಯತಾ (PHH) ಪಡಿತರ ಚೀಟಿಗಳಿಗೆ ಗೋಧಿಯನ್ನು ಪ್ರತಿ ಕೆ.ಜಿ.ಗೆ ರೂ.21/- ರಂತೆ ಭಾರತೀಯ ಆಹಾರ ನಿಗಮದಿಂದ ಖರೀದಿಸಿ ವಿತರಿಸಲಾಗುತ್ತಿದೆ.

ಕಡತ ಸಂಖ್ಯೆ: ಆನಾಸ 99 ಎಫ್‌ಪಿಪಿ 2021 (ಇ-ಆಫೀಸ್)

(ಉಮೇಶ್ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು.